**ಮಲಯಾಳಂ ಮೂಲ: ಟಿ. ಪದ್ಮನಾಭನ್**
**ಕನ್ನಡಕ್ಕೆ: ಎಂ.ಎಸ್. ಲಕ್ಷ್ಮಣಾಚಾರ್**

# ಭವಿಷ್ಯದಲ್ಲಿ ಒಬ್ಬ ಕಲಾವಿದ

ತಿಂಗಳ ಹಿಂದೆ ಒಂದು ದಿನ ಸಂಜೆ ಇಲ್ಲಿಯ ಸಾಮಾನ್ಯವಾದ ಒಂದು ರೆಸ್ಟೊರೆಂಟ್‌ನಲ್ಲಿ ಅವನನ್ನು ಮೊಟ್ಟ ಮೊದಲಾಗಿ ನೋಡಿದೆ. ಮೊದಲು ಎಂದರೆ ಬಹುಶಃ ಸರಿಯಲ್ಲ. ರೆಸ್ಟೊರೆಂಟ್‌ನಲ್ಲೋ ಅಥವಾ ಬೇರೆಲ್ಲಿಯೋ ನಾನು ಅದಕ್ಕಿಂತ ಮುಂಚೆ ಕಂಡಿದ್ದೆನೋ ಏನೋ. ಆದರೆ ಮೊಟ್ಟ ಮೊದಲಾಗಿ ಅವನನ್ನು ಗಮನಿಸಿದ್ದು ಅಂದಾಗಿತ್ತು.

ನಿನ್ನೆಯೂ ನಾನು ಅವನನ್ನು ಕಂಡಿದ್ದೆ. ಈ ಪಟ್ಟಣದಲ್ಲೇ ಕಂಡಿದ್ದೆ. ಅದು ಒಂದು ವಿಚಿತ್ರವಾದ ಸಂದರ್ಭದಲ್ಲಿ ಅದನ್ನು ಆಮೇಲೆ ಹೇಳುತ್ತೇನೆ.

ಒಂದು ದಿನ ಮ್ಯಾಟನೀ ಷೋ ನೋಡಿದ ನಂತರ ಆ ರೆಸ್ಟೊರೆಂಟ್‌ಗೆ ಹೋಗಿದ್ದೆ. ಆ ಸಿನಿಮಾ ಅಷ್ಟೇನೂ ಆಧುನಿಕ ಸೌಕರ್ಯಗಳಿಲ್ಲದಿರುವ ಈ ನಿವೇಶನದ ಒಂದು ಬಹು ಹಳೆಯ ಥಿಯೇಟರ್‌ನಲ್ಲಾಗಿತ್ತು. ಅದೂ ಬಹು ಕಡಿಮೆ ಬಜೆಟ್‌ನಲ್ಲಿ ತೆಗೆಯಲಾಗಿದ್ದ ಒಂದು 'ಕಪ್ಪು ಬಿಳುಪು' ಚಿತ್ರವಾಗಿತ್ತು. ಆ ಚಿತ್ರದಲ್ಲಿ ನಟಿಸಿದವರಾರೂ ಖ್ಯಾತಿವೆತ್ತವರಲ್ಲ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ ಆ ಚಿತ್ರ ಕಾಣಲು ಇದೇನೂ ಕೊರತೆ ಎನ್ನಿಸುವಂತಿರಲಿಲ್ಲ. ನಾನು ಬಹಳ ಕಾಲದ ನಂತರ ಕಂಡ ಒಂದು ಒಳ್ಳೆಯ ಚಿತ್ರವಾಗಿತ್ತದು.

ಅದರ ಕಥೆ ಅನಾಥಾಲಯದಲ್ಲಿ ತನ್ನ ಬಾಲ್ಯವನ್ನು ಕಳೆದ ಒಬ್ಬ ಯುವಕನೊಂದಿಗೆ ಆಗಿನ ಸಮಾಜವು ಬಹು ಕ್ರೂರವಾಗಿ ವರ್ತಿಸುತ್ತಿದ್ದುದೂ, ಅದರ ಫಲವಾಗಿ ಯುವಕನು ಮಾನಸಿಕವಾಗಿ ನೋವನ್ನನುಭವಿಸಿದ್ದೂ ಆಗಿತ್ತು.

ನನ್ನನ್ನು ಆ ಕಥೆ ಬಹುವಾಗಿ ನೋಯಿಸಿತು.

ಸಿನಿಮಾ ಮುಗಿದು ನಾನು ಹೊರಕ್ಕೆ ಬಂದಾಗ ಅಲ್ಲಿಯ ಬಿಸಿಲಿನ ತಾಪವೇನೂ ಕಡಿಮೆಯಾಗಿರಲಿಲ್ಲ.

ರಸ್ತೆಯ ಬದಿಯಲ್ಲಿ ಕಟ್ಟಡಗಳ ಮನಸ್ಸಿನಲ್ಲಿ ಆ ಹುಡುಗನೇ